# 2021-22 ನೇ ಸಾಲಿನ ಸಾವಯವ ಇಂಗಾಲ ಹೆಚ್ಚಿಸುವ ಅಭಿಯಾನ ಕಾರ್ಯಕ್ರಮದ ಮಾರ್ಗಸೂಚಿ

**ಲೆಕ್ಕ ಶೀರ್ಷಿಕೆ: 2401-00-103-0-15 (ಪ್ಲಾನ್)**

**ಉ.ಲೆ.ಶೀ: 106(ಸಹಾಯ ಧನ)**
**ಉ.ಲೆ.ಶೀ: 422(ಪರಿಶಿಷ್ಟ ಜಾತಿ ಉಪಯೋಜನೆ)**
**ಉ.ಲೆ.ಶೀ: 423(ಪರಿಶಿಷ್ಟ ಪಂಗಡ ಉಪ ಯೋಜನೆ)**

ಕೃಷಿಯಲ್ಲಿ ಗುಣಮಟ್ಟದ ಆಹಾರ ಉತ್ಪಾದಿಸುವ ದೃಷ್ಟಿಯಿಂದ ಸರ್ಕಾರವು ಸಮಗ್ರ ಪೋಷಕಾಂಶಗಳ ನಿರ್ವಹಣೆಗೆ (Integrated Nutrient Management-INM) ಹೆಚ್ಚಿನ ಪ್ರೋತ್ಸಾಹ ನೀಡುತ್ತಾ ಬಂದಿದ್ದು, ಮಣ್ಣಿನ ಫಲವತ್ತತೆಯನ್ನು ಉತ್ತಮ ಪಡಿಸುವ ಸಲುವಾಗಿ ಮಣ್ಣಿಗೆ ಹೆಚ್ಚಿನ ಪ್ರಮಾಣದಲ್ಲಿ ವಿವಿಧ ಸಾವಯವ ಗೊಬ್ಬರಗಳನ್ನು ಸೇರಿಸುವುದು ಅವಶ್ಯಕವಾಗಿರುತ್ತದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಣ್ಣಿನಲ್ಲಿ ಸಾವಯವ ಅಂಶವು ಕಡಿಮೆಯಾಗುತ್ತಾ ಬಂದಿದ್ದು, ಮಣ್ಣಿನ ಆರೋಗ್ಯ ಕ್ಷೀಣಿಸುತ್ತಿದೆ. ರಾಜ್ಯದಲ್ಲಿ ಸುಮಾರು 58.00 ಲಕ್ಷ ಹೆಕ್ಟೇರ್ ಕೃಷಿ ಭೂಮಿಯ ಮಣ್ಣಿನಲ್ಲಿ ಶೇ.0.5ಕ್ಕೂ ಕಡಿಮೆ ಸಾವಯವ ಇಂಗಾಲ ಇರುವುದು ಮಣ್ಣಿನ ಮಾದರಿಗಳ ಪರೀಕ್ಷೆಯಲ್ಲಿ ಕಂಡು ಬಂದಿರುತ್ತದೆ. ಆದ್ದರಿಂದ ಮಣ್ಣಿಗೆ ಸಾವಯವ ಇಂಗಾಲ ಸೇರ್ಪಡೆ ಮಾಡುವುದು ಅತಿ ಅವಶ್ಯಕವಿರುತ್ತದೆ. ಪ್ರಮುಖವಾಗಿ ಹಸಿರೆಲೆ ಗೊಬ್ಬರಗಳಾದ ಸೆಣಬು, ಡಯಾಂಚಾ, ಉದ್ದು, ಹೆಸರು, ಅಲಸಂದಿ, ಹುರುಳಿ, ವೆಲ್ವೆಟ್ ಬಿನ್ಸ್ ಇತ್ಯಾದಿಗಳು ಹಾಗು ಸಾವಯವ ಗೊಬ್ಬರಗಳನ್ನು ಮಣ್ಣಿಗೆ ಸೇರ್ಪಡೆ ಮಾಡುವುದರಿಂದ ಮಣ್ಣಿನಲ್ಲಿ ಸಾವಯವ ಅಂಶವನ್ನು ಹೆಚ್ಚಿಸಬಹುದಾಗಿದೆ. ಮಣ್ಣಿನಲ್ಲಿ ಸಾವಯವ ಅಂಶವನ್ನು ಹೆಚ್ಚಿಸಲು ದ್ವಿದಳ ಧಾನ್ಯಗಳನ್ನು ಒಣ ವಾತಾವರಣದ ಭೂಮಿಯಲ್ಲಿ ಬಳಕೆ ಮಾಡುವುದು ಮತ್ತು ಹಸಿರೆಲೆ ಗೊಬ್ಬರ ಬೀಜಗಳನ್ನು ತೇವಯುಕ್ತ ವಾತಾವರಣದ ಭೂಮಿಯಲ್ಲಿ ಬಳಕೆ ಮಾಡುವುದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

ಸಾವಯವ ಇಂಗಾಲವು ಮಣ್ಣಿನಲ್ಲಿ ಹೆಚ್ಚಿನ ತೇವಾಂಶವನ್ನು ಹಿಡಿದಿಟ್ಟುಕೊಳ್ಳಲು ಅನುವುಮಾಡುವುದಲ್ಲದೇ ಮಣ್ಣಿನ ಜೈವಿಕ ಕ್ರೀಯೆಯನ್ನು ಚುರುಕುಗೊಳಿಸುತ್ತದೆ. ಮಣ್ಣಿಗೆ ಸಾವಯವ ಅಂಶವಿರುವ ಗೊಬ್ಬರ ಸೇರಿದಾಗ, ಮಣ್ಣು ಸಡಿಲಗೊಂಡು ಮೃದುವಾಗುತ್ತದೆ, ಮಣ್ಣಿನ ಕಣಕಣಗಳು ಪರಸ್ಪರ ಕೂಡಿಕೊಂಡು, ಮಣ್ಣಿನಲ್ಲಿ ಗಾಳಿಯಾಡಲು ಅನುಕೂಲವಾಗುತ್ತದೆ. ಬೀಳುವ ಮಳೆನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಮಣ್ಣಲ್ಲಿ ಬೆಳೆಯುತ್ತದೆ. ಮಣ್ಣಿನಲ್ಲಿ ತೇವಾಂಶ ಹೆಚ್ಚುಕಾಲ ಇರುತ್ತದೆ.

ಮಣ್ಣಿನಲ್ಲಿ ಈ ಜೀವಿಗಳು ಬದುಕುಳಿಯಲು ಪೂರಕ ವಾತಾವರಣ ಸೃಷ್ಟಿಯಾಗುತ್ತದೆ. ಸಾವಯವ ಗೊಬ್ಬರವನ್ನು ತಿಂದು ಬದುಕುವ ಜೀವಿಗಳು ಕ್ರಮೇಣ ಗೊಬ್ಬರವನ್ನು ಗಿಡದ ಬೆಳವಣಿಗೆಗೆ ಅತ್ಯಗತ್ಯವಾದ ಪೋಷಕಾಂಶಗಳಾಗಿ ಪರಿವರ್ತಿಸುತ್ತವೆ. ಮಣ್ಣಿನ ಮೇಲ್ಪದರದಲ್ಲಿ Humus ರೂಪುಗೊಳ್ಳುತ್ತದೆ. ಇಂಗಾಲಾಂಶ ಹೆಚ್ಚಾಗಿರುವ ಮಣ್ಣುಗಳಲ್ಲಿ ಒಂದೆಡೆ ಮಣ್ಣುಜೀವಿಗಳ ವೈವಿಧ್ಯತೆ ಹಾಗೂ ಸಂಖ್ಯೆ ಹೆಚ್ಚಾದಂತೆ ಗಿಡದ ಬೆಳವಣಿಗೆ ಹಾಗೂ ಇಳುವರಿಯಲ್ಲಿ ಸುಧಾರಣೆ ಕಾಣಬಹುದು. ಗಿಡದ ಬೆಳವಣಿಗೆಗೆ ಪೂರಕವಾಗಿರುವ ಅಗತ್ಯ ಪೋಷಕಾಂಶಗಳು ಹಂತಹಂತವಾಗಿ ಗಿಡದ ಬೇರುಗಳ ಮೂಲಕ ರವಾನೆಯಾಗುತ್ತದೆ. ಹೆಚ್ಚು ಪ್ರಮಾಣದಲ್ಲಿ ನೀರನ್ನು ಹಿಡಿದಿಡುವ ಸಾಮರ್ಥ್ಯ ಮಣ್ಣಿಗೆ ಇರುತ್ತದೆ. ಜೊತೆಗೆ ಗಿಡಗಳಿಗೆ ಅಗತ್ಯವಿದ್ದಾಗ ಮಾತ್ರ ನೀರು ಬಳಕೆಯಾಗುತ್ತದೆ. ಈ ಮೂಲಕ ಬರಗಾಲದಲ್ಲಿಯೂ ಸಹ ಗಿಡಗಳಿಗೆ ಸದಾ ತೇವಾಂಶದ ವಾತಾವರಣ ಸಿಗುತ್ತದೆ. ಮಣ್ಣಲ್ಲಿನ ಸಾವಯವ ಅಂಶ ಮಣ್ಣಿನ ರಸಸಾರವನ್ನು ಸಮತೋಲನದಲ್ಲಿಡುತ್ತದೆ. ಮಣ್ಣಿನ ಸಾವಯವ ಅಂಶವು ಮಣ್ಣಿನ ಸವಕಳಿಯಾಗುವುದನ್ನು ತಪ್ಪಿಸುತ್ತದೆ. ಪೋಷಕಾಂಶಗಳಾದ ಪೊಟಾಸಿಯಂ, ಕ್ಯಾಲ್ಸಿಯಂ ಮತ್ತು ಮೆಗ್ನೇಷಿಯಂ ಜೊತೆಗೂಡುವುದರಿಂದ, ಅವು ಸೋರಿಹೋಗುವುದು ತಪ್ಪುತ್ತದೆ. ಮಣ್ಣಿನಲ್ಲಿ ಸೃಷ್ಟಿಯಾಗುವ ಮಣ್ಣು ಜೀವಿಗಳು ಮಾಲಿನ್ಯಕಾರಕ ವಸ್ತುಗಳನ್ನು ಹೀರಿ ವಾತಾವರಣವನ್ನ ಶುದ್ಧಗೊಳಿಸುತ್ತವೆ. ಮಣ್ಣಿನ ಸಾವಯವ ಅಂಶವು ಬೆಳೆಯು ಸತ್ವಯುತವಾಗಿ ಬೆಳೆದು, ಸಾಮಾಜಿಕ ಆರೋಗ್ಯ ಕಾಪಾಡಲು ಅನುವುಮಾಡುತ್ತದೆ.

2021-22 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಕಂಡಿಕೆ(52)ರಲ್ಲಿ "ದ್ವಿದಳ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಲು ಬಿತ್ತನೆ ಬೀಜ ಹಾಗೂ ಹಸಿರೆಲೆ ಗೊಬ್ಬರ ವಿತರಣೆ ಮಾಡಿ ಸಾವಯವ ಇಂಗಾಲ ಹೆಚ್ಚಿಸುವ ಅಭಿಯಾನ ಕಾರ್ಯಕ್ರಮವನ್ನು ರೂ.75 ಕೋಟಿ ವೆಚ್ಚದಲ್ಲಿ ಮುಂದಿನ ಐದು ವರ್ಷಗಳಲ್ಲಿ ಅನುಷ್ಠಾನಗೊಳಿವ ಉದ್ದೇಶಕ್ಕೆ 2021-22ನೇ ಸಾಲಿನಲ್ಲಿ ರೂ.10.00 ಕೋಟಿ ಅನುದಾನವನ್ನು ಒದಗಿಸಲಾಗುವುದು" ಎಂದು ಘೋಷಿಸಿರುತ್ತಾರೆ.

2021-22ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪಿಸಿರುವ ನೂತನ ಯೋಜನೆ "ಸಾವಯುವ ಇಂಗಾಲ ಹೆಚ್ಚಿಸುವ ಅಭಿಯಾನ" ಸರ್ಕಾರಿ ಆದೇಶ ಸಂ. AGRI-AML-119/2021 ಬೆಂಗಳೂರು, ದಿನಾಂಕ;04-08-2021 ರನ್ವಯ ಅನುಮೋದನೆ ದೊರೆತಿರುತ್ತದೆ.

ಸಾವಯುವ ಇಂಗಾಲ ಹೆಚ್ಚಿಸುವ ಕಾರ್ಯಕ್ರಮದಡಿ ಪ್ರಾತ್ಯಕ್ಷಿಕೆಗಳನ್ನು ಕೈಗೊಂಡು ಅದರ ಮಹತ್ವವನ್ನು ರೈತರಿಗೆ ತಿಳಿಯಪಡಿಸುವುದು. ವಿವಿಧ ದ್ವಿದಳ ಧಾನ್ಯ ಬೀಜಗಳು ಮತ್ತು ಹಸಿರೆಲೆ ಗೊಬ್ಬರ ಬೀಜಗಳನ್ನು ರಿಯಾಯತಿ ದರದಲ್ಲಿ ವಿತರಣೆ ಮಾಡುವುದು ಮತ್ತು ಹಸಿರೆಲೆ ಗೊಬ್ಬರ ಬೀಜಗಳನ್ನು ಬಳಕೆ ಮಾಡುವ ರೈತರಿಗೆ ನೇರ ನಗದು ಸೌಲಭ್ಯ ವರ್ಗಾವಣೆ ಮೂಲಕ(Direct Benefit Transfer) ಬ್ಯಾಂಕ್ ಖಾತೆಗೆ ಪ್ರೋತ್ಸಾಹಧನ ಜಮೆ ಮಾಡಲಾಗುವುದು.

ನೂತನ ಯೋಜನೆ "ಸಾವಯುವ ಇಂಗಾಲ ಹೆಚ್ಚಿಸುವ ಅಭಿಯಾನ" ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ಕೆಳಕಂಡಂತೆ ಘಟಕಗಳನ್ನು 2021-22ನೇ ಸಾಲಿಗೆ ರೂಪಿಸಿದೆ.

**2021-22 ನೇ ಸಾಲಿನ ಸಾವಯುವ ಇಂಗಾಲ ಹೆಚ್ಚಿಸುವ ಅಭಿಯಾನದಡಿ ಕೈಗೊಳ್ಳಲಾಗುವ ಕಾರ್ಯಕ್ರಮಗಳ ವಿವರಗಳು ಕೆಳಗಿನಂತಿವೆ.**

(ಭೌತಿಕ: ಹೆಕ್ಟೇರ್) **(ಆರ್ಥಿಕ: ಲಕ್ಷ ರೂ.ಗಳು)**

| ಕ್ರ. ಸಂ | ಘಟಕಗಳು | ಪ್ರತಿ ಹೆ.ಗೆ ಮೀರದಂತೆ | ಸಹಾಯ ಧನ-106 | | ಪರಿಶಿಷ್ಟ ಜಾತಿ ಉಪ ಯೋಜನೆ (422) | | ಪರಿಶಿಷ್ಟ ಪಂಗಡ ಉಪಯೋಜನೆ (423) | | ಒಟ್ಟು | |
|---|---|---|---|---|---|---|---|---|---|---|
| | | | ಶೇ.75 ರ ರಿಯಾಯಿತಿ ದರ | | ಶೇ.75 ರ ರಿಯಾಯಿತಿ ದರ | | ಶೇ.75 ರ ರಿಯಾಯಿತಿ ದರ | | | |
| | | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಅ | ಹಸಿರೆಲೆ ಗೊಬ್ಬರ ಬೀಜ ವಿತರಣೆ | ರೂ.3000/- | 12608 | 378.25 | 2867 | 86.00 | 1167 | 35.00 | 16642 | 499.25 |
| ಆ | ಸಾವಯುವ ಇಂಗಾಲ ಹೆಚ್ಚಿಸುವ ಪ್ರಾತ್ಯಕ್ಷಿಕೆ | ರೂ.2500/- | 30 | 0.75 | - | - | - | - | 30 | 0.75 |
| | **ಯೋಜನಾ ಮೊತ್ತ** | | 12638 | 379.00 | 2867 | 86.00 | 1167 | 35.00 | 16672 | 500.00 |

**2021-22ನೇ ಸಾಲಿನ ಈ ಕೆಳಕಂಡ ಘಟಕಗಳು ಅನುಷ್ಠಾನಗೊಳಿಸುವುದು.**

**ಅ)ಸಾವಯವ ಇಂಗಾಲ ಹೆಚ್ಚಿಸುವ ಪ್ರಾತ್ಯಕ್ಷಿಕೆಗಳು:**

ಸಾವಯವ ಇಂಗಾಲ ಹೆಚ್ಚಿಸುವ ನವೀನ ತಾಂತ್ರಜ್ಞಾನಗಳನ್ನು ರೈತರ ಜಮೀನಿನಲ್ಲಿ ಪ್ರಾತ್ಯಕ್ಷಿಕೆಗಳ ಮೂಲಕ ಪ್ರದರ್ಶಿಸಲು ಫಲಾನುಭವಿ ರೈತರಿಗೆ ಪ್ರತಿ ಹೆಕ್ಟೇರ್'ಗೆ ರೂ.2500/-ಗಳನ್ನು(ಶೇ.100) ಮೀರದಂತೆ ಒದಗಿಸಿ, ಮಣ್ಣಿನಲ್ಲಿ ಸಾವಯವ ಇಂಗಾಲ ಹೆಚ್ಚಿಸುವ ಉಪಯುಕ್ತತೆಯ ಬಗ್ಗೆ ರೈತರಿಗೆ ಅರಿವು ಮೂಡಿಸುವುದು. ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವ ರೈತರಿಗೆ ಹಸಿರೆಲೆ ಗೊಬ್ಬರ ಬೀಜಗಳನ್ನು ನೀಡಬಹುದಾಗಿದೆ. ನಿಗಧಿಪಡಿಸಿರುವ ಸಹಾಯಧನವನ್ನು ಮೀರಿ ತಗಲುವ ವೆಚ್ಚವನ್ನು ಫಲಾನುಭವಿ ರೈತರೇ ಭರಿಸುವುದು. ಪ್ರತಿ ಜಿಲ್ಲೆಗಳಲ್ಲಿ ಒಂದು ಹೆಕ್ಟೇರ್ ವಿಸ್ತೀರ್ಣದ ಎರಡು ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು. ಕೃಷಿ ವಿಜ್ಞಾನ ಕೇಂದ್ರಗಳೊಂದಿಗೆ ಜಿಲ್ಲೆಗಳ ಅಗತ್ಯತೆಯಂತೆ ಮಣ್ಣಿನಲ್ಲಿ ಸಾವಯವ ಇಂಗಾಲ ಹೆಚ್ಚಿಸುವ ಬಗ್ಗೆ ಇತ್ತೀಚಿನ ವಿನೂತನ ವೈಜ್ಞಾನಿಕ ಪ್ರಾತ್ಯಕ್ಷಿಕೆಗಳನ್ನು ತಿರ್ಮಾನಿಸಿ ಅನುಷ್ಠಾನಗೊಳಿಸುವುದು,

ಒಂದೇ ರೈತರ ಜಮೀನಿನಲ್ಲಿ ಕನಿಷ್ಟ ಎರಡು ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು. ಪ್ರಾತ್ಯಕ್ಷಿಕೆ ಕೈಗೊಳ್ಳುವ ಮೊದಲು ಹಾಗೂ ಪ್ರಾತ್ಯಕ್ಷಿಕೆ ಕೈಗೊಂಡ ಎರಡು ವರ್ಷಗಳ ಸಾವಯವ ಇಂಗಾಲ ಮತ್ತು ಇತರೆ ಪೊಷಕಾಂಶಗಳ ಪ್ರಮಾಣವನ್ನು ಮಣ್ಣು ಆರೋಗ್ಯ ಕೇಂದ್ರಗಳಲ್ಲಿ ವಿಶ್ಲೇಷಿಸುವುದು. ಸದರಿ ಪ್ರಾತ್ಯಕ್ಷಿಕೆಗಳ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವಾಗ ವಿಶ್ಲೇಷಣಾ ವರದಿ ಹಾಗೂ ರೈತರಿಗೆ ವಿತರಿಸಿದ ಪರಿಕರಗಳ ವಿವರಗಳನ್ನು ಒಳಗೊಂಡಿರಬೇಕು. ವರದಿಯನ್ನು ನಮೂನೆ-2 ರಂತೆ ಸಲ್ಲಿಸುವುದು

ಈ ಕಾರ್ಯಕ್ರಮಕ್ಕಾಗಿ ಉ.ಲೆ.ಶಿ:ಸಹಾಯಧನ(106)ರಡಿ 2021-22 ನೇ ಸಾಲಿಗೆ 1.50 ಲಕ್ಷ ರೂ.ಗಳ ಅನುದಾನವನ್ನು ಒದಗಿಸಲು ಯೋಜಿಸಿದೆ. ಜಿಲ್ಲಾವಾರು ಭೌತಿಕ-ಆರ್ಥಿಕ ಗುರಿಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ.

**ಅ) ಹಸಿರೆಲೆ ಗೊಬ್ಬರ ಬೀಜ ವಿತರಣೆ:**

ಹಸಿರೆಲೆ ಗೊಬ್ಬರಗಳು ಕಡಿಮೆ ವೆಚ್ಚದಲ್ಲಿ ಸ್ಥಳದಲ್ಲಿಯೇ ಸಸ್ಯ ಪೋಷಕಾಂಶಗಳನ್ನು ಒದಗಿಸಿರುವುದರ ಜೊತೆಗೆ ಸಾವಯವ ವಸ್ತುಗಳನ್ನು ಸೇರಿಸಿ ಮಣ್ಣಿನ ರಚನೆ, ನೀರು ಹಿಡಿದಿಟ್ಟುಕೊಳ್ಳುವ ಸಾಮಥ್ಯ ಹಾಗೂ ಜೈವಿಕ ಕ್ರಿಯೆಗಳನ್ನು ಸುಧಾರಿಸುವಲ್ಲಿ ಬಹಳ ಸಹಕಾರಿಯಾಗುತ್ತವೆ. ಹಸಿರೆಲೆ ಗೊಬ್ಬರಗಳನ್ನು ಇನ್ನೂ ಹೆಚ್ಚು ಜನಪ್ರಿಯಗೊಳಿಸುವುದು

ಅವಶ್ಯವಿರುತ್ತದೆ. ಈ ನಿಟ್ಟಿನಲ್ಲಿ ಡಯಾಂಚಾ, ಸನ್ ಹೆಂಪ್, ಪಿಳ್ಳೆ ಪಿಸರು, ಸೆಸ್ಬೇನಿಯಾ, ಗ್ಲಿರಿಸೀಡಿಯಾ, ದ್ವಿದಳಧಾನ್ಯ ಬೆಳೆಗಳು ಇತ್ಯಾದಿ ಹಸಿರೆಲೆ ಗೊಬ್ಬರ ಬೆಳೆಗಳನ್ನು ಬಳಕೆ ಮಾಡುವುದು ಸೂಕ್ತವಾಗಿರುತ್ತದೆ. ಹಸಿರೆಲೆ ಗೊಬ್ಬರ ಬಳಕೆಯನ್ನು ಪ್ರೋತ್ಸಾಹಿಸಲು ರೈತರಿಗೆ ಈ ಬೆಳೆಗಳ ಬಿತ್ತನೆ ಬೀಜಗಳನ್ನು ಶೇ.75ರ ರಿಯಾಯಿತಿ ದರ ಅಥವಾ ಪ್ರತಿ ಹೆಕ್ಟೇರಿಗೆ ರೂ 3000/- ಯಾವುದು ಕಡಿಮೆಯೋ ಅದನ್ನು ನೀಡುವುದು. ರೈತನಿಗೆ ಎರಡು ಹೆಕ್ಟೇರ್ ವರೆಗೆ ಸಹಾಯಧನ ಸೀಮಿತಗೊಳಿಸುವುದು. ಈ ಕಾರ್ಯಕ್ರಮಕ್ಕಾಗಿ ಉ.ಲೆ.ಶಿ:ಸಹಾಯಧನ(106)ರಡಿ 2021-22 ನೇ ಸಾಲಿಗೆ 378.25 ಲಕ್ಷ ರೂ.ಗಳ ಅನುದಾನವನ್ನು ಒದಗಿಸಲಾಗಿದೆ. ಪರಿಶಿಷ್ಟ ಜಾತಿ ಉಪಯೋಜನೆ (422) ಯಡಿ 86.00 ಲಕ್ಷ ರೂ.ಗಳು ಮತ್ತು ಗಿರಿಜನ ಉಪ ಯೋಜನೆ (423) ಯೋಜನೆಯಡಿ 35.00 ಲಕ್ಷ ರೂ.ಗಳ ಅನುದಾನವನ್ನು ಒದಗಿಸಲಾಗಿದೆ. ಜಿಲ್ಲಾವಾರು ಭೌತಿಕ-ಆರ್ಥಿಕ ಗುರಿಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ

**ಸಾಮಾನ್ಯ ಸೂಚನೆಗಳು:**

- ಯೋಜನೆಯಲ್ಲಿ ಸೌಲಭ್ಯಗಳನ್ನು ನೀಡುವಾಗ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಆದ್ಯತೆ ನೀಡತಕ್ಕದ್ದು.
- ಎಲ್ಲಾ ಯೋಜನೆಗಳಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಮಹಿಳೆ, ಅಲ್ಪಸಂಖ್ಯಾತ ಮತ್ತು ವಿಕಲ ಚೇತನ ರೈತರಿಗೆ ನಿಗಧಿಪಡಿಸಿರುವ ಮೀಸಲಾತಿ ಅನುಪಾತದಂತೆ ಪ್ರಗತಿ ಸಾಧಿಸುವುದು.
- ಭೌತಿಕ ಮತ್ತು ಆರ್ಥಿಕ ಪ್ರಗತಿ ಮತ್ತು ಫಲಾನುಭವಿಯ ವಿವರಗಳನ್ನು ಕಡ್ಡಾಯವಾಗಿ ಇಲಾಖೆಯ ಕೆ-ಕಿಸಾನ್ ತಂತ್ರಾಂಶದಲ್ಲಿ ನಮೂದಿಸುವುದು ಮತ್ತು ವರದಿಯನ್ನು ನಿಗಧಿತ ನಮೂನೆ 1 ಮತ್ತು 2 ರಲ್ಲಿ ಪ್ರತಿ ಮಾಹೆಯ 5ನೇ ತಾರೀಖಿನೊಳಗಾಗಿ ಇ-ಮೇಲ್ ddamanure@gmail.com ಮುಖಾಂತರ ತಪ್ಪದೇ ಸಲ್ಲಿಸುವುದು.

(ಅಪರ ಕೃಷಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕೃಷಿ ನಿರ್ದೇಶಕರು.

ಅನುಬಂಧ-1

## 2021–22 ನೇ ಸಾಲಿನ ಜಿಲ್ಲಾವಾರು ಸಾವಯವ ಇಂಗಾಲ ಹೆಚ್ಚಿಸುವ ಅಭಿಯಾನ ಕಾರ್ಯಕ್ರಮಗಳ ಭೌತಿಕ ಮತ್ತು ಆರ್ಥಿಕ ಗುರಿ

**ಲೆಕ್ಕಶೀರ್ಷಿಕೆ: 2401–00–103–0–15(ಪ್ಲಾನ್)**

| ಕ್ರ.ಸಂ | ಜಿಲ್ಲೆ | Area Under Agri. Crops | ಉ.ಲೆ.ಶೀ: ಸಹಾಯ ಧನ –106 | | | | | | ಉ.ಲೆ.ಶೀ: ಪ.ಜಾ. ಉಪ ಯೋಜನೆ (422) | | ಉ.ಲೆ.ಶೀ: ಗಿರಿಜನ ಉಪಯೋಜನೆ (423) | | ಒಟ್ಟು | |
|---|---|---|---|---|---|---|---|---|---|---|---|---|---|---|
| | | | ಸಾವಯವ ಇಂಗಾಲ ಹೆಚ್ಚಿಸುವ ಪ್ರಾತ್ಯಕ್ಷಿಕೆ | | ಹಸಿರೆಲೆ ಗೊಬ್ಬರ ಬೀಜ ವಿತರಣೆ | | ಒಟ್ಟು | | ಹಸಿರೆಲೆ ಗೊಬ್ಬರ ಬೀಜ ವಿತರಣೆ | | ಹಸಿರೆಲೆ ಗೊಬ್ಬರ ಬೀಜ ವಿತರಣೆ | | | |
| | | | ಭೌತಿಕ (ಹೆ.ಗಳಲ್ಲಿ) | ಆರ್ಥಿಕ (ಲಕ್ಷ ರೂ.ಗಳಲ್ಲಿ) | ಭೌತಿಕ (ಹೆ.ಗಳಲ್ಲಿ) | ಆರ್ಥಿಕ (ಲಕ್ಷ ರೂ.ಗಳಲ್ಲಿ) | ಭೌತಿಕ (ಹೆ.ಗಳಲ್ಲಿ) | ಆರ್ಥಿಕ (ಲಕ್ಷ ರೂ.ಗಳಲ್ಲಿ) | ಭೌತಿಕ (ಹೆ.ಗಳಲ್ಲಿ) | ಆರ್ಥಿಕ (ಲಕ್ಷ ರೂ.ಗಳಲ್ಲಿ) | ಭೌತಿಕ (ಹೆ.ಗಳಲ್ಲಿ) | ಆರ್ಥಿಕ (ಲಕ್ಷ ರೂ.ಗಳಲ್ಲಿ) | ಭೌತಿಕ (ಹೆ.ಗಳಲ್ಲಿ) | ಆರ್ಥಿಕ (ಲಕ್ಷ ರೂ.ಗಳಲ್ಲಿ) |
| | Rate/Subsidy per unit( Rs.in Lakhs) | | | 0.025 | | 0.030 | | | | 0.300 | | 0.300 | | |
| 1 | ಬಾಗಲಕೋಟೆ | 6.35 | 1 | 0.025 | 712 | 21.36 | 713 | 21.38 | 162 | 4.86 | 66 | 1.98 | 941 | 28.22 |
| 2 | ಬೆಂಗಳೂರು(ಗ್ರಾಂ) | 0.59 | 1 | 0.025 | 66 | 1.98 | 67 | 2.01 | 15 | 0.45 | 6 | 0.18 | 88 | 2.64 |
| 3 | ಬೆಂಗಳೂರು (ನ) | 0.18 | 1 | 0.025 | 20 | 0.61 | 21 | 0.64 | 5 | 0.14 | 2 | 0.06 | 28 | 0.83 |
| 4 | ಬೆಳಗಾಂ | 11.68 | 1 | 0.025 | 1310 | 39.29 | 1311 | 39.31 | 298 | 8.93 | 121 | 3.64 | 1729 | 51.88 |
| 5 | ಬಳ್ಳಾರಿ | 7.88 | 1 | 0.025 | 883 | 26.50 | 884 | 26.53 | 201 | 6.03 | 82 | 2.45 | 1167 | 35.01 |
| 6 | ಬೀದರ್ | 6.58 | 1 | 0.025 | 738 | 22.13 | 739 | 22.16 | 168 | 5.03 | 68 | 2.05 | 975 | 29.24 |
| 7 | ಬಿಜಾಪುರ | 8.98 | 1 | 0.025 | 1007 | 30.20 | 1008 | 30.23 | 229 | 6.87 | 93 | 2.79 | 1330 | 39.89 |
| 8 | ಚಾಮರಾಜನಗರ | 2.75 | 1 | 0.025 | 308 | 9.25 | 309 | 9.27 | 70 | 2.10 | 29 | 0.86 | 408 | 12.23 |
| 9 | ಚಿಕ್ಕಬಳ್ಳಾಪುರ | 1.25 | 1 | 0.025 | 140 | 4.20 | 141 | 4.23 | 32 | 0.96 | 13 | 0.39 | 186 | 5.57 |
| 10 | ಚಿಕ್ಕಮಗಳೂರು | 4.68 | 1 | 0.025 | 525 | 15.74 | 526 | 15.77 | 119 | 3.58 | 49 | 1.46 | 694 | 20.80 |
| 11 | ಚಿತ್ರದುರ್ಗಾ | 3.35 | 1 | 0.025 | 376 | 11.27 | 377 | 11.29 | 85 | 2.56 | 35 | 1.04 | 497 | 14.90 |
| 12 | ದಾವಣಗೆರೆ | 5.85 | 1 | 0.025 | 656 | 19.68 | 657 | 19.70 | 149 | 4.47 | 61 | 1.82 | 867 | 26.00 |
| 13 | ಧಾರವಾಡ | 4.45 | 1 | 0.025 | 499 | 14.97 | 500 | 14.99 | 113 | 3.40 | 46 | 1.38 | 660 | 19.78 |
| 14 | ಗದಗ | 3.15 | 1 | 0.025 | 353 | 10.60 | 354 | 10.62 | 80 | 2.41 | 33 | 0.98 | 467 | 14.01 |
| 15 | ಗುಲ್ಬರ್ಗಾ | 3.85 | 1 | 0.025 | 432 | 12.95 | 433 | 12.97 | 98 | 2.94 | 40 | 1.20 | 571 | 17.12 |

| ಕ್ರ.ಸಂ | ಜಿಲ್ಲೆ | Area Under Agri. Crops | ಉ.ಲೆ.ಶೀ: ಸಹಾಯ ಧನ –106 | | | | | | ಉ.ಲೆ.ಶೀ: ಪ.ಜಾ. ಉಪ ಯೋಜನೆ (422) | | ಉ.ಲೆ.ಶೀ: ಗಿರಿಜನ ಉಪಯೋಜನೆ (423) | | ಒಟ್ಟು | |
|---|---|---|---|---|---|---|---|---|---|---|---|---|---|---|
| | | | ಸಾವಯವ ಇಂಗಾಲ ಹೆಚ್ಚಿಸುವ ಪ್ರಾತ್ಯಕ್ಷಿಕೆ | | ಹಸಿರೆಲೆ ಗೊಬ್ಬರ ಬೀಜ ವಿತರಣೆ | | ಒಟ್ಟು | | ಹಸಿರೆಲೆ ಗೊಬ್ಬರ ಬೀಜ ವಿತರಣೆ | | ಹಸಿರೆಲೆ ಗೊಬ್ಬರ ಬೀಜ ವಿತರಣೆ | | | |
| | | | ಭೌತಿಕ (ಹೆ.ಗಳಲ್ಲಿ) | ಆರ್ಥಿಕ (ಲಕ್ಷ ರೂ.ಗಳಲ್ಲಿ) | ಭೌತಿಕ (ಹೆ.ಗಳಲ್ಲಿ) | ಆರ್ಥಿಕ (ಲಕ್ಷ ರೂ.ಗಳಲ್ಲಿ) | ಭೌತಿಕ (ಹೆ.ಗಳಲ್ಲಿ) | ಆರ್ಥಿಕ (ಲಕ್ಷ ರೂ.ಗಳಲ್ಲಿ) | ಭೌತಿಕ (ಹೆ.ಗಳಲ್ಲಿ) | ಆರ್ಥಿಕ (ಲಕ್ಷ ರೂ.ಗಳಲ್ಲಿ) | ಭೌತಿಕ (ಹೆ.ಗಳಲ್ಲಿ) | ಆರ್ಥಿಕ (ಲಕ್ಷ ರೂ.ಗಳಲ್ಲಿ) | ಭೌತಿಕ (ಹೆ.ಗಳಲ್ಲಿ) | ಆರ್ಥಿಕ (ಲಕ್ಷ ರೂ.ಗಳಲ್ಲಿ) |
| **16** | ಹಾಸನ | 3.45 | 1 | 0.025 | 387 | 11.60 | 388 | 11.63 | 88 | 2.64 | 36 | 1.07 | 512 | 15.34 |
| **17** | ಹಾವೇರಿ | 3.25 | 1 | 0.025 | 364 | 10.93 | 365 | 10.96 | 83 | 2.49 | 34 | 1.01 | 482 | 14.45 |
| **18** | ಕೊಡಗು | 0.52 | 1 | 0.025 | 58 | 1.75 | 59 | 1.77 | 13 | 0.40 | 5 | 0.16 | 78 | 2.33 |
| **19** | ಕೋಲಾರ | 0.55 | 1 | 0.025 | 62 | 1.85 | 63 | 1.87 | 14 | 0.42 | 6 | 0.17 | 82 | 2.47 |
| **20** | ಕೊಪ್ಪಳ | 4.94 | 1 | 0.025 | 554 | 16.62 | 555 | 16.64 | 126 | 3.78 | 51 | 1.54 | 732 | 21.96 |
| **21** | ಮಂಡ್ಯ | 2.65 | 1 | 0.025 | 297 | 8.92 | 298 | 8.95 | 68 | 2.03 | 28 | 0.83 | 394 | 11.80 |
| **22** | ಮೈಸೂರು | 5.19 | 1 | 0.025 | 581 | 17.44 | 582 | 17.47 | 132 | 3.97 | 54 | 1.61 | 768 | 23.05 |
| **23** | ಉತ್ತರ ಕನ್ನಡ | 0.95 | 1 | 0.025 | 107 | 3.20 | 108 | 3.23 | 24 | 0.73 | 10 | 0.30 | 142 | 4.25 |
| **24** | ರಾಯಚೂರು | 4.85 | 1 | 0.025 | 544 | 16.31 | 545 | 16.34 | 124 | 3.71 | 50 | 1.51 | 719 | 21.56 |
| **25** | ರಾಮನಗರ | 1.05 | 1 | 0.025 | 118 | 3.53 | 119 | 3.56 | 27 | 0.80 | 11 | 0.33 | 156 | 4.69 |
| **26** | ಶಿವಮೊಗ್ಗ | 4.20 | 1 | 0.025 | 471 | 14.13 | 472 | 14.15 | 107 | 3.21 | 44 | 1.31 | 623 | 18.67 |
| **27** | ದಕ್ಷಿಣ ಕನ್ನಡ | 0.85 | 1 | 0.025 | 95 | 2.86 | 96 | 2.88 | 22 | 0.65 | 9 | 0.26 | 127 | 3.80 |
| **28** | ತುಮಕೂರು | 4.50 | 1 | 0.025 | 505 | 15.14 | 506 | 15.16 | 115 | 3.44 | 47 | 1.40 | 667 | 20.01 |
| **29** | ಉಡುಪಿ | 0.69 | 1 | 0.025 | 78 | 2.33 | 79 | 2.35 | 18 | 0.53 | 7 | 0.22 | 103 | 3.09 |
| **30** | ಯಾದಗಿರಿ | 3.24 | 1 | 0.025 | 363 | 10.90 | 364 | 10.92 | 83 | 2.48 | 34 | 1.01 | 480 | 14.41 |
| | **ಮಹಾ ಮೊತ್ತ** | **112.455** | **30** | **0.75** | **12608** | **378.25** | **12638** | **379.00** | **2867** | **86.00** | **1167** | **35.00** | **16672** | **500.00** |

## ನಮೂನೆ-1

**2021-22 ನೇ ಸಾಲಿನ ಸಾವಯವ ಇಂಗಾಲ ಹೆಚ್ಚಿಸುವ ಅಭಿಯಾನದಡಿ ಕೈಗೊಂಡ ಕಾರ್ಯಕ್ರಮದ ಗುರಿ ಮತ್ತು ಪ್ರಗತಿ ವಿವರ:**

**ಜಿಲ್ಲೆ:** (ಭೌತಿಕ: ಹೆಕ್ಟೇರ್) **(ಆರ್ಥಿಕ: ಲಕ್ಷ ರೂ.ಗಳು)**

| ಕ್ರ. ಸಂ | ಘಟಕಗಳು | ಸ್ಥಿತಿ | ಸಹಾಯ ಧನ-106 | | ಪರಿಶಿಷ್ಟ ಜಾತಿ ಉಪ ಯೋಜನೆ (422) | | ಪರಿಶಿಷ್ಟ ಪಂಗಡ ಉಪಯೋಜನೆ (423) | | ಒಟ್ಟು | |
|---|---|---|---|---|---|---|---|---|---|---|
| | | | ಶೇ.75 ರ ರಿಯಾಯಿತಿ ದರ | | ಶೇ.75 ರ ರಿಯಾಯಿತಿ ದರ | | ಶೇ.75 ರ ರಿಯಾಯಿತಿ ದರ | | | |
| | | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಅ | ಹಸಿರೆಲೆ ಗೊಬ್ಬರ ಬೀಜ ವಿತರಣೆ. (ಪ್ರತಿ ಹೆ.ಗೆ ರೂ.3000/-ಮೀರದಂತೆ) | ಗುರಿ | | | | | | | | |
| | | ಸಾಧನೆ | | | | | | | | |
| ಆ | ಸಾವಯವ ಇಂಗಾಲ ಹೆಚ್ಚಿಸುವ ಪ್ರಾತ್ಯಕ್ಷಿಕೆ (ಪ್ರತಿ ಪ್ರಾತ್ಯಕ್ಷಿಕೆಗೆ ರೂ.2500/- ಮೀರದಂತೆ) | ಗುರಿ | | | | | | | | |
| | | ಸಾಧನೆ | | | | | | | | |
| | **ಯೋಜನಾ ಮೊತ್ತ** | ಗುರಿ | | | | | | | | |
| | | ಸಾಧನೆ | | | | | | | | |

New Scheme Guidelines/-

# ನಮೂನೆ-2

**2021-22 ನೇ ಸಾಲಿನ ಸಾವಯವ ಇಂಗಾಲ ಹೆಚ್ಚಿಸುವ ಅಭಿಯಾನದಡಿ ಕೈಗೊಂಡ ಕಾರ್ಯಕ್ರಮದ ಸಾವಯವ ಇಂಗಾಲ ಹೆಚ್ಚಿಸುವ ಪ್ರಾತ್ಯಕ್ಷಿಕೆ ವಿವರ:**

**ಜಿಲ್ಲೆ:**

| ಕ್ರಮ ಸಂ. | ರೈತರ ಹೆಸರು ಮತ್ತು ವಿಳಾಸ | ಭೂಮಿಯ ಸರ್ವೆ ನಂಬರ್ ವಿವರಗಳು | ವಿತರಿಸಲಾದ ಪರಿಕರಗಳ ವಿವರಗಳು | ಭೂಮಿಯಲ್ಲಿ ಸಾವಯವ ಇಂಗಾಲದ ಪ್ರಮಾಣ(ಶೇ) | | |
|---|---|---|---|---|---|---|
| | | | | ಪ್ರಾತ್ಯಕ್ಷಿಕೆಗೂ ಮುಂಚೆ | ಮೊದಲನೇ ವರ್ಷ | ಎರಡನೇ ವರ್ಷ |
| | | | | | | |
| | | | | | | |
| | | | | | | |

********